ಕರ್ನಾಟಕ ಸರ್ಕಾರ

**ಅಕ್ಟೋಬರ್ 9, 2016**

## ಆಯುಧಪೂಜೆ – ವಿಜಯ ದಶಮಿ :
## ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ




**ಬೆಂಗಳೂರು, ಅಕ್ಟೋಬರ್ 9:**

ದಸರಾ ಸಂಭ್ರಮದ ವಿಶೇಷ ಆಚರಣೆ ಹಾಗೂ ವಿಶಿಷ್ಟ ಆಕರ್ಷಣೆ ಆಯುಧ ಪೂಜೆ ಹಾಗೂ ವಿಜಯ ದಶಮಿಯ ಸುಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ ಶುಭ ಹಾರೈಸಿದ್ದಾರೆ.

ಆಯುಧ ಪೂಜೆಯ ದಿನ ನಾಡ ರಕ್ಷಣೆಗೆ ಅಗತ್ಯವಿರುವ ಎಲ್ಲಾ ಆಯುಧಗಳನ್ನು ಪೂಜಿಸುವ ಸಂಪ್ರದಾಯವು, ಅವುಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ಅನುವು ಮಾಡಿಕೊಡುತ್ತದೆ. ಆದರೆ, ಇದೀಗ ಈ ಸಂಪ್ರದಾಯವು ಹೊಸ ರೂಪ ಪಡೆದು ಕೊಂಡಿದೆ. ಅನ್ನದಾತ ತನ್ನ ದುಡಿಮೆಗೆ ನೆರವು ನೀಡುವ ನೇಗಿಲನ್ನು ಪೂಜಿಸುತ್ತಾನೆ. ಜನಸಾಮಾನ್ಯರು ತಮ್ಮ ಬದುಕಿಗೆ ನೆರವಾಗುವ ಹಾಗೂ ತಮಗೆ ಬದುಕು ಕಟ್ಟಿಕೊಡುವ ಎಲ್ಲಾ ಉಪಕರಣಗಳನ್ನು–ವಸ್ತುಗಳನ್ನು–ಸಲಕರಣೆಗಳನ್ನು ಹಾಗೂ ವಾಹನಗಳನ್ನು ಪೂಜಿಸುತ್ತಾರೆ. ನೆಲದ ಮೇಲೆ ಸಾಗುವ ಎತ್ತಿನ ಬಂಡಿ ಹಾಗೂ ಆಗಸದಲ್ಲಿ ಹಾರುವ ವಿಮಾನ ಎಲ್ಲವೂ ಶುಭ್ರಗೊಂಡು ನಳನಳಿಸಿ, ಪೂಜಿಸಲ್ಪಡುತ್ತವೆ. ಎಲ್ಲೆಡೆ ಹೊಸತನ ಮನೆ ಮಾಡುತ್ತದೆ.

ವಿಜಯ ದಶಮಿಯ ದಿನ ತಾವು ಕೈಗೊಳ್ಳುವ ಎಲ್ಲಾ ಕಾರ್ಯಗಳೂ ಯಶಸ್ಸಿಯಾಗುತ್ತವೆ ಎಂಬುದು ಬಹು ಜನರ ನಂಬಿಕೆ. ಅಕ್ಷರಾಭ್ಯಾಸ ಪ್ರಾರಂಭಿಸುವುದರಿಂದ ವಿದ್ಯಾಭ್ಯಾಸ ಮುಂದುವರೆಸುವ ಬಗ್ಗೆ ಮಕ್ಕಳ ಭವಿಷ್ಯ ರೂಪಿಸುವ ಎಲ್ಲಾ ಕಾರ್ಯಚಟುವಟಿಕೆಗಳೂ ವಿಜಯ ದಶಮಿಯಂದೇ ನಡೆಯುತ್ತವೆ. ಮನೆ ನಿರ್ಮಾಣಕ್ಕೆ ಶಿಲಾನ್ಯಾಸವಾಗಲೀ, ಮನೆಯ ಗೃಹ ಪ್ರವೇಶವಾಗಲೀ ಅಥವಾ ವ್ಯಾಪಾರ ವಹಿವಾಟು ಪ್ರಾರಂಭಕ್ಕಾಗಲೀ ವಿಜಯ ದಶಮಿ ಶುಭ ದಿನ.

ಆಯುಧ ಪೂಜೆ ಹಾಗೂ ವಿಜಯ ದಶಮಿಯು ರಾಜ್ಯವನ್ನು ಅಭಿವೃದ್ಧಿಯತ್ತ ಹಾಗೂ ರಾಜ್ಯದ ಜನತೆಯನ್ನು ಸಮೃದ್ಧಿಯತ್ತ ಕೊಂಡೊಯ್ಯಲಿ ಎಂದು ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ಹಾರೈಸಿದ್ದಾರೆ.

********